ದಿನಾಂಕಃ 13-06- 2019 ಓ ಎಸ್ ನಂ.88/2014 (ಡಿ.ಡಬ್ಲ್ಯು 1)

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್ ಬಿ ಪಿ ವಕೀಲರಿಂದಃ

ವಾದಿ ಯಲ್ಲಪ್ಪಾ ಕೀಳೋಜಿ ಮತ್ತು 2 ನೇ ವಾದಿ ತುಳಜಾಬಾಯಿ ಕೀಳೋಜಿ ಇವರಿಗೆ ಈ ಮೊದಲು ಕಿಳಪ್ಪ ಗೌಡಾ ಎನ್ನುವ ಅಡ್ಡ ಹೆಸರಿನಿಂದ ಕರೆಯುತ್ತಿದ್ದರು ಎಂದರೆ ಸರಿ . ಅದರಂತೆ ನಮ್ಮ ತಂದೆ ದತ್ತಾತ್ರೆಯ ನನ್ನ ಕಾಕಾ ರಾನಬಾ ಇವರನ್ನು ಸಹ ಮೊದಲು ಕಿಳಪ್ಪ ಗೌಡಾ ಎನ್ನುವ ಅಡ್ಡ ಹೆಸರಿನಿಂದ ಕರೆಯುತ್ತಿದ್ದರು ಎಂದರೆ ಸರಿ. ನನ್ನ ತಂದೆಯವರು ಕಿಳಪ್ಪ ಗೌಡಾ ಎನ್ನುವ ಅಡ್ಡ ಹೆಸರನ್ನು ತೆಗೆಯಿಸಿ ಗಾವಡೆ ಎನ್ನುವ ಅಡ್ಡ ಹೆಸರಿನ್ನು ಬದಲಾಯಿಸಿಕೊಂಡು ಎಂದರೆ ಸರಿ. ಆ ಪ್ರಕಾರ ದಾಖಲೆಗಳಲ್ಲಿ ಕೀಳಪ್ಪ ಗೌಡಾ ಎನ್ನುವದರ ಬದಲು ಗಾವಡೆ ಎಂಬುದಾಗಿ ದಾಖಲು ಮಾಡಿಸಿಕೊಂಡಿದ್ದು ಆ ಪ್ರಕಾರ ಮುಂದುವರೆದಿದೆ ಎಂದರೆ ಸರಿ. ಆ ಪ್ರಕಾರ ವಾದಿಯರ ಮನೆತನದ ಅಡ್ಡ ಹೆಸರು ಕೀಳೋಜಿ ಎಂತಲೂ ನಮ್ಮ ಮನೆತದ ಹೆಸರು ಗಾವಡೆ ಯಂತಲೂ ದಾಖಲೆಗಳಲ್ಲಿ ನಮೂದಾಗಿ ಮುಂದುವರೆದಿದೆ ಎಂದರೆ ಸರಿ.

ದಾವಾ ಜಮೀನಿನ ಪೈಕಿ ರಿ ಸ ನಂಬರ 12/4 ಅ ಕ್ಷೇತ್ರ 3 ಗುಂಟೆ ಮತ್ತು ರಿ ಸ ನಂಬರ 12/4 ಬಿ ಕ್ಷೇತ್ರ 2 ಗುಂಟೆ ಇದೆ ಎಂದರೆ ಸರಿ. ಈ ಎರಡು ಜಮೀನುಗಳು ಒಂದಕ್ಕೊಂದು ಹೊಂದಿ ಕೊಂಡಿವೆ ಎಂದರೆ ಸರಿ. ಸದರಿ ಜಮೀನುಗಳ ಪೂರ್ವಕ್ಕೆ ರಸ್ತೆ , ಪಶ್ಚಿಮಕ್ಕೆ ಶಿವಪ್ಪ ಮಲ್ಲಪ್ಪ ಮೊಂಗ್ ಇವರ ಜಮೀನು, ದಕ್ಷಿಣಕ್ಕೆ ನಾರಾಯಣ ವೈಜು ಕೀಳೋಜಿ ಇವರ ಜಮೀನು ಮತ್ತು ಉತ್ತರಕ್ಕೆ ಸುರೇಶ ಈಶ್ವರ ಕೀಳಪ್ಪ ಗಾವಡೆ ಇವರ ಜಮೀನು ಇದೆ ಎಂದರೆ ಸರಿ.

ದಾವಾ ಜಮೀನಿನ ಪೈಕಿ ರಿ ಸ ನಂಬರ 18/1 ಅ ಕ್ಷೇತ್ರ 29 ಗುಂಟೆ ಎಂದರೆ ಸರಿ. ಸದರಿ ಜಮೀನಿನ ಪೂರ್ವಕ್ಕೆ ರಸ್ತೆ , ಪಶ್ಚಿಮಕ್ಕೆ ಅಶೋಕ ಪಾಡುರಂಗ ಕಾಂಬಳೆ ಇವರ ಜಮೀನು, ದಕ್ಷಿಣಕ್ಕೆ ರಿ ಸ ನಂಬರ 18/1 ಬ ಜಮೀನು ಮತ್ತು ಉತ್ತರಕ್ಕೆ ರಾಮಚಂದ್ರ ಸಾವಳು ಖವಣೇಕರ ಇವರ ಜಮೀನು ಇದೆ ಎಂದರೆ ಸರಿ.

ದಾವಾ ಜಮೀನಿನ ಪೈಕಿ ರಿ ಸ ನಂಬರ 18/1 ಬ ಕ್ಷೇತ್ರ 19 ಗುಂಟೆ ಎಂದರೆ ಸರಿ. ಸದರಿ ಜಮೀನಿನ ಪೂರ್ವಕ್ಕೆ ರಸ್ತೆ , ಪಶ್ಚಿಮಕ್ಕೆ ವಿಲಾಸ ದುಳಪ್ಪ ಕಾಂಬಳಕೆ ಇವರ ಜಮೀನು, ದಕ್ಷಿಣಕ್ಕೆ ನಾರಾಯಣ ವೈಜು ಕೀಳೋಜಿ ಇವರ ಜಮೀನು ಮತ್ತು ಉತ್ತರಕ್ಕೆ ರಿ ಸ ನಂಬರ 18/1 ಅ ಜಮೀನು ಇದೆ ಎಂದರೆ ಸರಿ.

ದಾವಾ ಜಮೀನಿನ ಪೈಕಿ ರಿ ಸ ನಂಬರ 18/6 ಅ ಕ್ಷೇತ್ರ 4 ಗುಂಟೆ ಮತ್ತು ರಿ ಸ ನಂಬರ 18/6 ಬ ಕ್ಷೇತ್ರ 3 ಗುಂಟೆ ಎಂದರೆ ಸರಿ. ಈ ಎರಡು ಜಮೀನುಗಳು ಒಂದಕ್ಕೊಂದು ಹೊಂದಿ ಕೊಂಡಿವೆ ಎಂದರೆ ಸರಿ ಸದರಿ ಜಮೀನುಗಳ ಪೂರ್ವಕ್ಕೆ, ಪಶ್ಚಿಮ ಮತ್ತು ಉತ್ತರಕ್ಕೆ: ದೇವಪ್ಪ ವಿಠೋಬಾ ಕೇಳೋಜಿ ಹಾಗೂ ದಕ್ಷಿಣಕ್ಕೆ: ಮಹಾದೇವ ಪುಂಡಲೀಕ ಕೇಳೋಜಿ ಇವರ ಜಮೀನು ಎಂದರೆ ಸರಿ.

ದಾವಾ ಜಮೀನಿನ ಪೈಕಿ ರಿ ಸ ನಂಬರ 18/2+3+4+5+8/ಎಚ್ ಕ್ಷೇತ್ರ 18 ಗುಂಟೆ ಎಂದರೆ ಸರಿ. ಸದರಿ ಜಮೀನಿನ ಪೂರ್ವಕ್ಕೆ ರಸ್ತೆ , ಪಶ್ಚಿಮ , ದಕ್ಷಿಣ ಮತ್ತು ಉತ್ತರಕ್ಕೆ ದೇವಜಿ ವಿಠೋಬಾ ಕೇಳೋಜಿ ಇವರ ಜಮೀನು ಎಂದರೆ ಸರಿ.

ಮೊದಗಾ ಗ್ರಾಮದ ರಿ ಸ ನಂಬರ 18/7 ಒಟ್ಟು ಕ್ಷೇತ್ರ 1 ಎಕರೆ 19 ಗುಂಟೆ ಅದರ ಪೈಕಿ ನಮ್ಮ ಘರಾಣೇಗೆ 1 ಎಕರೆ 14 ಗುಂಟೆ 4 ಆಣೆ ಜಮೀನು ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ನಮ್ಮ ಮನೆತಕ್ಕೆ 29 ವರೆ ಗುಂಟೆ ಜಮೀನು ಬರುತ್ತದೆ ಅದು ನನ್ನ ಹೆಸರಿಗೆ ಇದೆ ಎಂದು ಹೇಳುತ್ತಾರೆ. ರಿ ಸ ನಂಬರ 18/7 ರಲ್ಲಿ 1 ಎಕೆರ 14 ಗುಂಟೆ 4 ಆಣೆಯನ್ನು ಹೊರತು ಪಡಿಸಿ ಉಳಿದ ಜಮೀನು ನಮ್ಮ ಮನೆತನಕ್ಕೆ ಸಂಬಂದಿಸಿದಲ್ಲ ಎಂದರೆ ಸಾಕ್ಷಿಯು ನನ್ನ ಮನೆತನಕ್ಕೆ ಸಂಬಂದ ಇಲ್ಲ ಅದು ವಾದಿಯ ಮನೆತನಕ್ಕೆ ಸಂಬಂದ ಎಂದು ಹೇಳುತ್ತಾರೆ.

ರಿ ಸ ನಂಬರ 18/7 ಕ್ಷೇತ್ರ 1 ಎಕರೆ 19 ಗುಂಟೆ ಪೈಕಿ 1 ಎಕರೆ 14 ಗುಂಟೆ 4 ಆಣೆ ಜಮೀನಿನ ಚಕಬಂದಿ ಪೂರ್ವಕ್ಕೆ ನಾರಾಯಣ ವೈಜು ಕೇಳೋಜಿ ಇವರ ಜಮೀನು ಪಶ್ಚಿಮಕ್ಕೆ ರಸ್ತೆ , ದಕ್ಷಿಣ ಸುನಂದಾ ಬಾಗೋಜಿ ಹರಾಡೆ ಎಂದರೆ ಸರಿ ಸಾಕ್ಷಿಯು ಉತ್ತರಕ್ಕೆ ದೇವಜಿ ವಿಠೋಬಾ ಕೇಳೋಜಿ ಇವರ ಜಮೀನು ಬರುವುದಿಲ್ಲ , ಅಲ್ಲಿ ನನ್ನ ಜಮೀನು ರಿ ಸ ನಂಬರ 18/7 ರಲ್ಲಿ ಕ್ಷೇತ್ರ 29 ವರೆ ಗುಂಟೆ ಜಮೀನುನ ಇರುತ್ತದೆ.
ಸದರಿ ಜಮೀನಿನ ಉತ್ತರಕ್ಕೆ ದೇವುಜಿ ವಿಠೋಬಾ ಕೇಳೋಜಿ ಯವರ ಜಮೀನು ಇದ್ದರೂ ಸಹ ನನ್ನ ಜಮೀನು ಇರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ರಿ ಸ ನಂಬರ 156/7-ಪಿ1 ಕ್ಷೇತ್ರ 7 ಗುಂಟೆ ಜಮೀನಿನ ಚಕಬಂದಿ ಪೂರ್ವಕ್ಕೆ ಪುಂಡಲೀಕ ವಿಠೋಬಾ ದಳವಿ , ಪಶ್ಚಿಮಕ್ಕೆ ರಿ ಸ ನಂಬರ 162/3-ಪಿ1 ಜಮೀನು, ಉತ್ತರ ಮತ್ತು ದಕ್ಷಿಣಕ್ಕೆ ಮಾರುತಿ ನಾಗೋಜಿ ಕೇಳೋಜಿ ಇವರ ಜಮೀನು ಬರುತ್ತದೆ ಎಂದರೆ ಸರಿ.

ರಿ ಸ ನಂಬರ 161 ಎ 3 ಕ್ಷೇತ್ರ 6 ಗುಂಟೆ ಜಮೀನಿನ ಚಕಬಂದಿ ಪೂರ್ವಕ್ಕೆ ಉಕಾರಾಮ ಬಾವಕ್ಕಣ್ಣ ಪಾಟೀಲ, ಪಶ್ಚಿಮಕ್ಕೆ ದೇವಜೀ ವಿಠೋಬಾ ಕೇಳೋಜಿ ಇವರ ಜಮೀನು ಎಂದರೆ ಸರಿ , ದಕ್ಷಿಣಕ್ಕೆ ರಿ ಸ ನಂಬರ 161/3-ಪಿ1 ಎಂದರೆ ಸರಿ ಮತ್ತು ಉತ್ತರಕ್ಕೆ ರಸ್ತೆ ಇದೆ ಎಂದರೆ ಸರಿಯಲ್ಲ ಸಾಕ್ಷಿಯು ನನ್ನ ಮಾಲ್ಕೀಯ ಜಮೀನು ಬರುತ್ತದೆ

ಎಂದು ಹೇಳುತ್ತಾರೆ. ಉತ್ತರಕೆ ದಿಕ್ಕಿಗೆ ಬರುವ ಜಮೀನಿನ ರಿ ಸ ನಂಬರ 162/3 ಪಿ -1 ಕ್ಷೇತ್ರ 2 ಎಕರೆ 5 ಗುಂಟೆ ನನ್ನ ಜಮೀನು ಇದೆ. ಸದರಿ ಜಮೀನಿನ ಉತ್ತರಕ್ಕೆ ರಸ್ತೆ ಇದ್ದರೂ ಸಹ ನನ್ನ ಜಮೀನು ಇರುವುದಾಗಿ ಸುಳ್ಳು ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ.

ನ್ಯಾಯಾಲಯದ ಅವದಿ ಮುಗಿದಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು, ಹುಕ್ಕೇರಿ

***DW-1 present. Sri RBP adv also present and permitted to further cross-examination. DW-1 partly examined. Since Court time is over Hence, further cross-examination deferred by 11-07-2019***

***Senior Civil Judge Hukkeri.***